# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ “ಶ್ರೀ ಗುರುದೇವ” ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ
ಪುಟ : ೪ ಸಂಪುಟ : ೭೧ ಸಂಚಿಕೆ : ೦೮

**15-08-2025 ಶ್ರಾವಣ ಮಾಸ : ಕೃಷ್ಣ ಪಕ್ಷ ಶುಕ್ರವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ

ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## ಅಮೇರಿಕಾ ಚಿಕಾಗೋದಲ್ಲಿ ನಡೆದ ಅಂತರಾಷ್ಟ್ರೀಯ ಜೈನ ಸಮಾವೇಶ ಮತ್ತು ಪ್ರವಾಸದ ಚಿತ್ರಣ

ಭಾರತದಲ್ಲಿ ಅನೇಕ ಸ್ಥಳಗಳಿಗೆ ಹೋಗಿ ಸಭೆ, ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶ ಆಗಾಗ ಸಿಗುತ್ತಿರುತ್ತದೆ. ಜೈನ ಧರ್ಮದ ಪ್ರಚಾರದಲ್ಲಿ ಕಿಂಚಿತ್ ಸೇವೆ ಮಾಡುವ ಅವಕಾಶ ಸಿಕ್ಕಿದೆ, ಪೂರ್ವದ ಸುಕೃತ. ಎರಡು ವರ್ಷಗಳ ಹಿಂದೆ ಕೆನಡಾ ದೇಶದ ಟೊರಾಂಟೋ ನಗರದಲ್ಲಿ ನಡೆದ ಪಂಚಕಲ್ಯಾಣದಲ್ಲಿ ಭಾಗವಹಿಸುವ ಅವಕಾಶ ಒದಗಿ ಬಂದಿತ್ತು. ಅದು ನಮ್ಮ ಜೀವನದ ಮೊದಲ ವಿದೇಶ ಪ್ರಯಾಣವಾಗಿತ್ತು. ಅದಾಗಲೇ ಅಲ್ಲಿಗೆ ಬಂದಿದ್ದ ಜೈನ ಸಂಘಟನೆಯ “ಅಂತರಾಷ್ಟ್ರೀಯ ಜೈನ ಸಮಾವೇಶ (ಕನ್ವೆಷನ್)”ದಲ್ಲಿ ಭಾಗವಹಿಸಲು ಆಹ್ವಾನಿಸಿದ್ದರು ಅದರಂತೆ ಈ ವರ್ಷ ಜುಲೈ ತಿಂಗಳು ಅಮೇರಿಕಾದ ಚಿಕಾಗೋ ನಗರದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಭಾಗವಹಿಸಿದೆವು.

WWW.HOMBUJAPADMAVATI.ORG

### ಜೈನ ಸಮಾವೇಶ (ಜೈನ್ ಕನ್ವೇಷನ್)-2025

ಈ ಬಾರಿಯ ಸಮಾವೇಶ ಚಿಕಾಗೋ ನಗರದಲ್ಲಿ ಜುಲೈ 3 ರಿಂದ 6 ರವರೆಗೆ ಆಯೋಜಿಸಲಾಗಿತ್ತು. ವೈವಿಧ್ಯತೆಯಲ್ಲಿ ಏಕತೆ (unity in diversity) ಎಂಬ ಧ್ಯೇಯ ವಾಕ್ಯ ಈ ಸಮಾವೇಶದ ಉದ್ದೇಶವಾಗಿತ್ತು. ಚಿಕಾಗೋ ನಗರದ ಸ್ಕೆಮ್ ಬರ್ಗ್ ಕನ್ವೆಷನ್ ಹಾಲ್‌ನಲ್ಲಿ ಸುಮಾರು 6 ರಿಂದ 7ಸಾವಿರ ಜನರ ಸಮೂಹ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಜೈನ ಧರ್ಮದ ಎಲ್ಲಾ ಸಂಪ್ರದಾಯಕ ದಿಗಂಬರ, ಶ್ವೇತಾಂಬರ ಇತ್ಯಾದಿ ಎಲ್ಲಾ ಪಂಗಡಗಳ ಧಾರ್ಮಿಕ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ದಿಗಂಬರ ಸಂಪ್ರದಾಯದಿಂದ ನಾವು ಮತ್ತು ಧರ್ಮಸ್ಥಳದ ಸುರೇಂದ್ರಕುಮಾರ ದಂಪತಿಗಳು ಕೂಡ ಭಾಗವಹಿಸಿದ್ದರು. ಮುಖ್ಯವೇದಿಕೆಯಲ್ಲಿ ಧಾರ್ಮಿಕ ನಾಯಕರುಗಳು ಉಪನ್ಯಾಸ, ವಿದ್ವಾಂಸರ ವ್ಯಾಖ್ಯಾನ, ಗಣ್ಯರ, ಸಾಧಕರ ಸನ್ಮಾನದ ಜೊತೆ-ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಹಾಗೆ ಬೇರೆ-ಬೇರೆ ಹಾಲ್‌ಗಳಲ್ಲಿ ವಿವಿಧ ರೀತಿಯ ಉಪನ್ಯಾಸ ಕಾರ್ಯಕ್ರಮಗಳು ಒಂದೇ ಸಮಯದಲ್ಲಿ ನಡೆಯುತ್ತಿದ್ದವು. ವಿಶೇಷವಾಗಿ ಪ್ರತಿವಾರ ಅಲ್ಲಿಯ ಬಸದಿಗಳಲ್ಲಿ ನಡೆಯುವ ಧಾರ್ಮಿಕ ಪಾಠಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪ್ರೋತ್ಸಾಹದ ಕಾರ್ಯಕ್ರಮಗಳು ಸಹ ನಡೆದವು.

“ಅಹಿಂಸೆಯಾದಿ ಪಂಚಾಣುವ್ರತಗಳ ಪರಿಪಾಲನೆ” ಇಂದಿನ ದೃಷ್ಟಿಯಲ್ಲಿ ಎಂಬ ವಿಷಯದಲ್ಲಿ ನಮಗೆ ವ್ಯಾಖ್ಯಾನ ಮಾಡುವ ಅವಕಾಶ ಪ್ರಾಪ್ತವಾಗಿತ್ತು. ಜೈನಧರ್ಮವು ಅತ್ಯಂತ ಪ್ರಾಚೀನ ಜೀವನ ಪದ್ಧತಿ ಮತ್ತು ಸಂಸ್ಕೃತಿಯನ್ನು ಹೊಂದಿರುವುದು. ಪ್ರಾಣಿ ಮಾತ್ರ ದಯೆ, ಮತ್ತು ಅಹಿಂಸೆಯ ಪರಿಪಾಲನೆಯು ಮುಖ್ಯ ಧ್ಯೇಯ, ವ್ರತವಾಗಿದೆ. ಪ್ರಪಂಚದ ಯಾವುದೇ ಸಂಸ್ಕೃತಿ, ಅಥವಾ ಧರ್ಮಗಳಲ್ಲಿ ಪಾಲನೆ ಮಾಡದೇ ಇರುವಷ್ಟು ಸೂಕ್ಷ್ಮ ಹಾಗೂ ಸರಳ ಜೀವನ ಶೈಲಿ ಜಿನ ಧರ್ಮದ್ದಾಗಿದೆ. ಅಹಿಂಸೆ ಧರ್ಮದ ಆಧಾರವಾಗಿದೆ, ಎಲ್ಲಿ ಅಂತರಂಗ, ಬಹಿರಂಗ ಹಿಂಸೆ ತ್ಯಾಗವಿರುತ್ತದೆ. ಅಲ್ಲಿ ಸತ್ಯ, ಅಸ್ತೇಯ, ಅಪರಿಗ್ರಹಗಳು ತಾನಾಗಿಯೇ ಪಾಲನೆಯಾಗುತ್ತದೆ. ಲೋಕದಲ್ಲಿ ಏನೆಲ್ಲಾ ಆವಿಷ್ಕಾರಗಳು ನಡೆದು ಬಂದಿದ್ದರು. ಅಹಿಂಸೆಯ ವ್ಯಾಖ್ಯಾನವು ಒಂದೇ ಆಗಿರುತ್ತದೆ. ಜೈನ ಧರ್ಮದ ಸಾರವು ಪ್ರತಿಯೊಂದು ಜೀವಿಯ “ಬದುಕು ಬದುಕಲು ಬಿಡು” ಎನ್ನುವ ಸೂತ್ರದೊಂದಿಗೆ ನಡೆಯುತ್ತದೆ ಎಂಬಿತ್ಯಾದಿ ವಿಷಯಗಳನ್ನು ಮಂಡಿಸಿದೆವು. ಮುಖ್ಯ ವೇದಿಕೆಯಲ್ಲಿ 3 ಬಾರಿ ಮಾತನಾಡಲು ಅವಕಾಶ ಸಿಕ್ಕಿತು. ಸಾಧರ್ಮ ಬಂಧುಗಳ ನಡುವೆ ಆತ್ಮೀಯವಾದ ಭೇಟಿ, ಮಾತುಗಳು ಸೌಹಾರ್ದ ಪೂರ್ಣವಾಗಿದ್ದಿತು. ಯುವ ಜನತೆಗಾಗಿ ಪ್ರತ್ಯೇಕ ಸಭಾಂಗಣದಲ್ಲಿ ಸಭೆ ಸಾಂಸ್ಕೃತಿಕ ಕಾರ್ಯಕ್ರಗಳು ಜರುಗಿದ್ದವು. ಭಾರತದ ವಿವಿಧ ರಾಜ್ಯಗಳಿಂದ ಹೋಗಿ ಉದ್ಯೋಗ, ವ್ಯಾಪಾರ ಮಾಡುತ್ತಾ ಅಮೇರಿಕ, ಕೆನಡಾ, ಯುರೋಪ ಮುಂತಾದ ದೇಶಗಳಲ್ಲಿ ನೆಲೆಸಿರುವ ಜೈನ ಬಂಧುಗಳು ವಿಶೇಷವಾಗಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

4ನೇ ಪುಟಕ್ಕೆ

ಶ್ರಾವಣ ಸಂಪತ್ ಶುಕ್ರವಾರದ ವಿಶೇಷಾಲಂಕಾರ

## “ಧರ್ಮವನ್ನರಿತು ಬಾಳುವ ಪಥವು ಸಂಕಷ್ಟ ಮುಕ್ತ”

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಅತಿಶಯ ಶ್ರೀಕ್ಷೇತ್ರದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಜು. 25, ಆ. 01, 08 ಹಾಗೂ ಆ. 15ರ ಶ್ರಾವಣ ಸಂಪತ್ ಶುಕ್ರವಾರಗಳಂದು ಊರ ಪರವೂರ ಭಕ್ತವೃಂದದವರು ಶ್ರದ್ಧಾಪೂರ್ವಕ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಸಾನಿಧ್ಯ, ನೇತೃತ್ವ ಹಾಗೂ ಉಪಸ್ಥಿತಿಯಲ್ಲಿ ಜಿನಾಗಮೋಕ್ತ ವಿಧಿ-ವಿಧಾನಗಳು ಜರುಗಿದವು.

“ಸರ್ವರಲ್ಲಿಯೂ ಧಾರ್ಮಿಕ ಅಸ್ಮಿತತೆ ಬೆಳೆಯಬೇಕು. ಧಾರ್ಮಿಕ ಭಕ್ತಿಭಾವ, ಶ್ರದ್ಧೆಯಿಂದ ಪೂಜೆ-ಕಾಣಿಕೆ ಸಮರ್ಪಣೆಯಿಂದ ಮಾನಸಿಕ ಕ್ಷೋಭೆ ದೂರವಾಗಿ ಜೀವನೋಲ್ಲಾಸ ವರ್ಧಿಸುತ್ತದೆ” ಎಂದ ಅವರು “ಪ್ರತಿಯೋರ್ವರು ಜೀವನದಲ್ಲಿ ಸಕಾರಾತ್ಮಕ ಆಶಾಭಾವದೊಂದಿಗೆ ಸದ್ಧರ್ಮ ವ್ರತಾಚರಣೆ ಪರಿಪಾಲಿಸುವ ಮೂಲಕ ವೈಯುಕ್ತಿಕ ಶ್ರೇಯಸ್ಸು ಲಭಿಸುವುದು ಶತಸಿದ್ಧ” ಎಂದು ಸ್ವಸ್ತಿಶ್ರೀಗಳವರು ಪ್ರವಚನದಲ್ಲಿ ತಿಳಿಸಿದರು.

“ಧರ್ಮವನ್ನರಿತು ಬಾಳುವ ಪಥವು ಸಂಕಷ್ಟ ಮುಕ್ತ ಎನ್ನುತ್ತಾ ಭಕ್ತಿಯ ಫಲಶ್ರುತಿ ಕುಟುಂಬದವರಿಗೂ, ಸಮಾಜ-ರಾಷ್ಟಕ್ಕೂ ದೊರಕಲಿದ್ದು, ಆಧ್ಯಾತ್ಮಿಕ ಜೀವನವು ಶ್ರೇಷ್ಠವಾದುದು” ಎಂದು ಭಕ್ತಸಮುದಾಯದವರನ್ನು ಆಶೀರ್ವದಿಸಿ ಹರಸಿದರು.

2ನೇ ಪುಟಕ್ಕೆ

### ಶರನ್ನವರಾತ್ರಿ-ವಿಜಯದಶಮಿ ಉತ್ಸವ

ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿದಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ನೇತೃತ್ವ, ಸಾನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ಶರನ್ನವರಾತ್ರಿ ಹಾಗೂ ವಿಜಯದಶಮಿ ದಿನವನ್ನು ಪರಂಪರೆಯಂತೆ ಧಾರ್ಮಿಕ ವಿಧಿಪೂರ್ವಕವಾಗಿ ನೆರವೇರಿಸಲಾಗುವುದು.

ಸೆ. 22 ಸೋಮವಾರದಂದು-ಶರನ್ನವರಾತ್ರಿ ಪ್ರಾರಂಭ (ಘಟಸ್ಥಾಪನೆ) ಸೆ. 29 ಸೋಮವಾರ-ಸರಸ್ವತಿ ಪೂಜೆ, (ಮೂಲಾ ನಕ್ಷತ್ರ) ಸೆ. 30 ಮಂಗಳವಾರ-ಜೀವದಯಾಷ್ಟಮಿ ಪೂಜೆ, ಅ. 01 ಬುಧವಾರ-ಮಹಾನವಮಿ (ಆಯುಧಪೂಜೆ) ಅ. 02 ಗುರುವಾರ-ವಿಜಯದಶಮಿ, ಬನ್ನಿಮಂಟಪಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಸ್ವಸ್ತಿಶ್ರೀಗಳವರ ಸಿಂಹಾಸನಾರೋಹಣ-ಶ್ರೀಗಳವರ ಪಾದಪೂಜೆ ನೆರವೇರಲಿದೆ.

ಹೊಂಬುಜ ಜೈನ ಮಠದ ಅಧೀನ ಕ್ಷೇತ್ರಗಳಾದ ಶ್ರೀಕ್ಷೇತ್ರ ಕುಂದಾದ್ರಿ, ವರಂಗ ಹಾಗೂ ಹಟ್ಟಿಯಂಗಡಿ ಜಿನಮಂದಿರಗಳಲ್ಲಿ ಶರನ್ನವರಾತ್ರಿ ಧಾರ್ಮಿಕ ಪೂಜಾ ವಿಧಿ-ವಿಧಾನಗಳು ನೆರವೇರಲಿವೆ. ಭಕ್ತವೃಂದದವರು ಶರನ್ನವರಾತ್ರಿ ಉತ್ಸವಗಳಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗುವಂತೆ ಆಡಳಿತಾಧಿಕಾರಿಗಳು ವಿನಂತಿಸಿದ್ದಾರೆ.

**ಸಂಪರ್ಕ: ಪೂಜಾ ಸೇವೆ ಮೊ: 9481453653, ವಸತಿ ಮೊ: 9483801460**

ಶ್ರೀಕ್ಷೇತ್ರ ಹೊಂಬುಜ ಜೈನ ಮಠದಲ್ಲಿ ಸಂಪತ್ ಶ್ರಾವಣ ಶುಕ್ರವಾರಗಳಂದು ಪೂಜಾ-ಸೇವಾಕರ್ತೃಗಳಿಗೂ ಮತ್ತು ಭೋಜನ ವ್ಯವಸ್ಥೆಗೆ ತನು-ಮನ-ಧನದೊಂದಿಗೆ ಸಹಕಾರ ನೀಡಿದ, ವಿಶೇಷವಾಗಿ ಕೊಲ್ಹಾಪುರ, ಅಥಣಿ, ಶಿರಹಟ್ಟಿ & ಐನಾಪುರ ಸುತ್ತಮುತ್ತಲಿನ ಭಕ್ತರು ಭೋಜನ ವ್ಯವಸ್ಥೆಗೆ ಸಹಕಾರ ನೀಡಿದ್ದಾರೆ. ಸರ್ವರಿಗೂ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿಯು ಸನ್ಮಂಗಲವನ್ನುಂಟು ಮಾಡಲೆಂದು ಪೂಜ್ಯ ಸ್ವಾಮೀಜಿಯವರು ಹರಸಿದ್ದಾರೆ.

# ಹೊಂಬುಜ ಅತಿಶಯ ಶ್ರೀಕ್ಷೇತ್ರದಲ್ಲಿ ನಾಗರಪಂಚಮಿ ಪರ್ವ



**ಹೊಂಬುಜ (ಜು. 29):** ಪ್ರಕೃತಿಯ ಸಂರಕ್ಷಣೆಯ ಮಹತ್ವವನ್ನು ಸರ್ವತ್ರ ಸಾದರಪಡಿಸುವ ನಾಗರಪಂಚಮಿ ರಾಷ್ಟ್ರೀಯ ಪರ್ವವಾಗಿದೆ. ಪ್ರಾಚೀನ ಧರ್ಮ ಪರಂಪರೆಯಲ್ಲಿ ನಾಗಾರಾಧನೆಯ ಐತಿಹ್ಯ ಪ್ರಧಾನವಾಗಿದೆ ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಶ್ರೀ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ತಿಳಿಸಿದರು.

ಉಪಸರ್ಗಗಳನ್ನು ನಿವಾರಿಸಿ ವೈಯುಕ್ತಿಕವಾಗಿ ರಕ್ಷಣೆ ನೀಡುವ ಧರಣೇಂದ್ರ ಯಕ್ಷ ಹಾಗೂ ಯಕ್ಷಿ ಪದ್ಮಾವತಿ ದೇವಿ ಕೃಪೆ ಎಲ್ಲರಿಗೂ ಲಭಿಸಲಿ. ವಿಫುಲ ಜಲನಿಧಿಯಿಂದ ಬೆಳೆ ವಿಪುಲವಾಗಿ ಬೆಳೆದು ಆಹಾರದ್ರವ್ಯಗಳು ಯಥೇಚ್ಛವಾಗಿ ದೊರೆಯಲೆಂದು ಶ್ರೀಗಳವರು ಆಶಿಸುತ್ತಾ, ನಾಗಾರಾಧನೆಯಿಂದ ಅನರ್ಘ್ಯ ಫಲಪ್ರಾಪ್ತಿಯಾಗಲಿ ಎಂದು ಹರಸಿದರು.

ಪ್ರಾತಃಕಾಲ ಶ್ರೀ ನೇಮಿನಾಥ ಸ್ವಾಮಿ, ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಶ್ರೀ ಆದಿನಾಥ ಸ್ವಾಮಿ ಸನ್ನಿಧಿಯಲ್ಲಿ ಆಗಮೋಕ್ತ ವಿಧಿಯಂತೆ ಪೂಜಾ ಕೈಕಂರ್ಯಗಳು ನೆರವೇರಿದವು. ಬಳಿಕ ಅಭೀಷ್ಟವರ ಪ್ರದಾಯಿನಿ ಶ್ರೀ ಪದ್ಮಾವತಿ ದೇವಿ, ಶ್ರೀ ಸರಸ್ವತಿ ದೇವಿ ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಕ್ಷೇತ್ರಪಾಲ ಸಾನಿಧ್ಯದಲ್ಲಿ ಭಕ್ತರು ಪೂಜೆ ಸಲ್ಲಿಸಿದರು. ಶ್ರೀ ನಾಗದೇವರ ಪೂಜೆಯನ್ನು ಎಳನೀರು, ಹಾಲು ಅರಿಶಿನ, ಫಲ-ಪುಷ್ಪ ಸಮರ್ಪಣೆಯ ಪೂರ್ವ ಪರಂಪರೆಯಂತೆ ನೆರವೇರಿಸಲಾಯಿತು.

## "ಧರ್ಮವನ್ನರಿತು ಬಾಳುವ ಪಥವು ಸಂಕಷ್ಟ ಮುಕ್ತ"

1ನೇ ಪುಟದಿಂದ

ಪ್ರಾತಃ ಕಾಲದಲ್ಲಿ ಶ್ರೀ ನೇಮಿನಾಥ ಸ್ವಾಮಿ, ಶ್ರೀಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ ಶ್ರೀ ಆದಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ ಸನ್ನಿಧಿಗಳಲ್ಲಿ ಅಷ್ಟವಿಧಾರ್ಚನೆ ಪೂಜೆ ನೆರವೇರಿತು. 108 ವಿವಿಧ ಶರ್ಕರ ನೈವೇದ್ಯಗಳನ್ನು ಫಲ-ಪುಷ್ಪದೊಂದಿಗೆ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಅರ್ಪಿಸಿ ಪರಂಪರಾನುಗತ ಪೂಜಾ ವಿಧಾನವು ಭಕ್ತರಿಗೆ ಧನ್ಯತೆಯ ಭಾವ ಸ್ಫುರಿಸಿತು. ವಸತಿ, ಉಪಹಾರ ಮತ್ತು ಅನ್ನಪ್ರಸಾದ ಸೇವೆಯನ್ನು ಶ್ರೀಮಠದ ವತಿಯಿಂದ ಅಚ್ಚುಕಟ್ಟಾಗಿ ನಿರ್ವಹಿಸಲಾಗಿತ್ತು.

WWW.HOMBUJAPADMAVATI.ORG

## 'ಧರ್ಮಸ್ಥಳ ಕ್ಷೇತ್ರ ನಿಂದನೆ ಸಲ್ಲದು'

**ಹೊಂಬುಜ :** ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಮೇಲೆ ನಿರಂತರ ದೋಷಾರೋಪಣೆ ಮಾಡುವ ಮೂಲಕ ನಿಂದಿಸಿ ವಿಕೃತ ಸಂತೋಷವನ್ನು ಅನುಭವಿಸುತ್ತಿರುವ ಸಮಾಜ ಘಾತಕ ಶಕ್ತಿಗಳ ಮೇಲೆ ಸರ್ಕಾರ ಮತ್ತು ನ್ಯಾಯಾಲಯವು ಕಠಿಣ ಕ್ರಮವನ್ನು ಜರುಗಿಸಬೇಕು. ಕೋಟ್ಯಾಂತರ ಜನರ ಶ್ರದ್ಧಾ ಕೇಂದ್ರದ ಮೇಲೆ ಮಾನಹಾನಿ ಮಾಡುವ ಕಾಯಕವನ್ನು ಕೆಲವರು ಇತ್ತೀಚೆಗೆ ರೂಢಿಸಿಕೊಂಡಿರುತ್ತಾರೆ.

ಸರ್ಕಾರ ಈಗಾಗಲೇ ಅನೇಕ ಬಾರಿ ತನ್ನ ತನಿಖಾ ಸಂಸ್ಥೆಗಳ ಮೂಲಕ ವಿಚಾರಣೆ ಮಾಡಿದೆ. ಮತ್ತೆ ಈಗ ಅನಾಮಿಕನ ಮಾತಿಗೆ ಬೆಲೆಕೊಟ್ಟು ಎಸ್.ಐ.ಟಿ. ರಚನೆ ಮಾಡಿ ತನಿಖೆ ನಡೆಯುತ್ತಿದೆ. ತನಿಖಾ ವರದಿ ಬರುವ ಮುಂಚೆಯೇ ಸ್ವಯಂ ಘೋಷಣೆ ಮಾಡುವ ಮೂಲಕ ಕೆಲವು ಸಾಮಾಜಿಕ ಜಾಲತಾಣಗಳ ಸಂಘಟಕರು, ಇನ್ನಿತರರು ಹತಾಶರಾಗಿ ಧರ್ಮ, ಧರ್ಮಾತ್ಮರ ನಿಂದೆ ಮಾಡುತ್ತಾ ಭಕ್ತ ಜನರ ಮನಸ್ಸಿಗೆ ಘಾಸಿ ಮಾಡಿ ಅಸಹಜ ಸಂತೋಷ ಪಡುತ್ತಿದ್ದಾರೆ.

ನಾವುಗಳು ತಪ್ಪಿತಸ್ಥರ ಪರವಾಗಿ ಇಲ್ಲ. ಕಾನೂನಿನ ಮತ್ತು ಸತ್ಯವಂತರ, ಧರ್ಮಾತ್ಮರ ಪರವಾಗಿ ಸಜ್ಜನರ ಜೊತೆಯಿದ್ದೇವೆ. 'ಸತ್ಯಮೇವ ಜಯತೆ', 'ಧರ್ಮೋ ರಕ್ಷತಿ ರಕ್ಷಿತಃ' ಸೂತ್ರಗಳನ್ನು ನಂಬಿರುವ ಭಕ್ತ ಜನರಿಗೆ ಸ್ವಧರ್ಮ, ಸ್ವದೇಶ ರಕ್ಷಣೆ ಮಾಡುವುದು ಗೊತ್ತಿದೆ. ಕಾನೂನಿಗೆ ತಲೆಬಾಗಿ ತಾಳ್ಮೆಯಿಂದಿರುವ ಜನರ ಪರೀಕ್ಷೆ ಸಲ್ಲದು. ಸರ್ಕಾರ ಮತ್ತು ಕಾನೂನು ಇಲಾಖೆಯವರು ಪರಸ್ಪರ ನಿಂದನೆ ಮತ್ತು ಸಮಾಜದಲ್ಲಿ ಅಶಾಂತಿ ಉಂಟುಮಾಡುತ್ತಿರುವ ಜನಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪೂಜ್ಯಶ್ರೀಗಳವರು ಆಗ್ರಹಿಸಿದ್ದಾರೆ.



**ಜಿನ-ದನಿ**

ತಿತ್ಥಯರಾದಿ-ದೇವೇಣಂ, ಧಮ್ಮ-ಕಮ್ಮ ಚ ದೇಸಿದಂ ।
ತಮ್ಹಾ ಹು ಮಣ್ಣದೇ ಬಂಭಾ, ಸೋ ದು ಜುಗ-ಪವಟ್ಟಗೋ ॥8॥
ಅಸೀ ಮಸೀ ಯ ವಾಣಿಜ್ಜಂ, ಸಿಪ್ಪಾ-ವಿಜ್ಜಾ ಕಿಸೀ ತಹಾ ।
ವಿಜ್ಜದೇ ಇಹ ದೇಸಮ್ಮಿ, ಆದಿ ದೇವಸ್ಸ ದೇಸಣಾ ॥9॥

ಅರ್ಥ: ಪ್ರಥಮ ತೀರ್ಥಂಕರರಾದ ಆದಿನಾಥರು ಧರ್ಮ ಮತ್ತು ಕರ್ಮಗಳ ನಿರ್ದೇಶನವನ್ನು ಮಾಡಿದರು ಆದ್ದರಿಂದ ಅವರು ಬ್ರಹ್ಮಾ ಎಂದು ಕರೆಯಲ್ಪಡುತ್ತಾರೆ. ಅವರೇ ಯುಗ ಪ್ರವರ್ತಕರಿದ್ದರು. ಅಸಿ, ಮಸಿ, ಕೃಸಿ, ವಿದ್ಯೆ, ಶಿಲ್ಪ ಹಾಗೂ ವಾಣಿಜ್ಯ ಶ್ರೀ ಆದಿದೇವರ ಉಪದೇಶವು ಈ ದೇಶದಲ್ಲಿ ವಿಧ್ಯಮಾನ ಇದೆ.

# ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

ಶ್ರಾವಣಮಾಸ ಕೃಷ್ಣಪಕ್ಷ ನವಮಿಯಿಂದ ಭಾದ್ರಪದ ಮಾಸ ಕೃಷ್ಣಪಕ್ಷ ದಶಮಿಯವರೆಗೆ

**ಶ್ರಾವಣ ಮಾಸ**

ಆ. 17 ಭಾನು-ನವಮಿ-ರೋಹಿಣಿ.
ಆ. 18 ಸೋಮ-ದಶಮಿ-ಮೃಗಶಿರಾ
ಆ. 19 ಮಂಗಳ-ಏಕಾದಶಿ-ಆರಿದ್ರಾ
ಆ. 20 ಬುಧ-ದ್ವಾದಶಿ-ಪುನರ್ವಸು
ಆ. 21 ಗುರು-ತ್ರಯೋದಶಿ-ಪುಷ್ಯ
**ಆ. 22 ಶುಕ್ರ-ಚತುರ್ದಶಿ-ಆಶ್ಲೇಷಾ, ಹೊಂಬುಜದಲ್ಲಿ 5ನೇ ಸಂಪತ್ ಶುಕ್ರವಾರದ ಪೂಜೆ.**
ಆ. 23 ಶನಿ-ಅಮವಾಸ್ಯೆ-ಮಘ

**ಭಾದ್ರಪದ ಮಾಸ**

ಆ. 24 ಭಾನು-ಪ್ರತಿಪದ-ಪೂರ್ವಾ
ಆ. 25 ಸೋಮ-ಬಿದಿಗೆ-ಉತ್ತರ
ಆ. 26 ಮಂಗಳ-ತದಿಗೆ-ಹಸ್ತ
ಆ. 27 ಬುಧ-ಚತುರ್ಥಿ-ಹಸ್ತ
**ಆ. 28 ಗುರು-ಪಂಚಮಿ-ಚಿತ್ತಾ, ದಶಲಕ್ಷಣ ಪರ್ವಾರಂಭ,**
ಆ. 29 ಶುಕ್ರ-ಷಷ್ಠಿ-ಸ್ವಾತಿ
ಆ. 30 ಶನಿ-ಸಪ್ತಮಿ-ವಿಶಾಖ
ಆ. 31 ಭಾನು-ಅಷ್ಟಮಿ-ಅನುರಾಧ
ಸೆ. 01 ಸೋಮ-ನವಮಿ-ಜ್ಯೇಷ್ಠಾ
ಸೆ. 02 ಮಂಗಳ-ದಶಮಿ-ಮೂಲ
ಸೆ. 03 ಬುಧ-ಏಕಾದಶಿ-ಪೂ.ಷಾಢ
ಸೆ. 05 ಶುಕ್ರ-ತ್ರಯೋದಶಿ-ಶ್ರವಣ
ಸೆ. 06 ಶನಿ-ಚತುರ್ದಶಿ-ಧನಿಷ್ಠಾ,
**ಸೆ. 07 ಭಾನು-ಹುಣ್ಣಿಮೆ-ಶತಭಿಷಾ, ಅನಂತನ ಹುಣ್ಣಿಮೆ, ಕ್ಷಮಾವಳಿ.**
ಸೆ. 08 ಸೋಮ-ಪ್ರತಿಪದ-ಪೂ.ಭಾದ್ರ
ಸೆ. 09 ಮಂಗಳ-ಬಿದಿಗೆ-ಉ.ಭಾದ್ರ
ಸೆ. 10 ಬುಧ-ತದಿಗೆ-ರೇವತಿ
ಸೆ. 11 ಗುರು-ಚತುರ್ಥಿ-ಅಶ್ವಿನಿ
ಸೆ. 12 ಶುಕ್ರ-ಪಂಚಮಿ-ಭರಣಿ
ಸೆ. 13 ಶನಿ-ಷಷ್ಠಿ-ಸಪ್ತಮಿ-ಕೃತ್ತಿಕಾ
ಸೆ. 14 ಭಾನು-ಅಷ್ಟಮಿ-ರೋಹಿಣಿ
ಸೆ. 15 ಸೋಮ-ನವಮಿ-ಮೃಗಶಿರಾ
ಸೆ. 16 ಮಂಗಳ-ದಶಮಿ-ಆರಿದ್ರಾ.

### ಹೊಂಬುಜದಲ್ಲಿ ಮುಕುಟ ಸಪ್ತಮಿ ಆಚರಣೆ

## "ಶ್ರೀ ಪಾರ್ಶ್ವನಾಥ ಸ್ವಾಮಿ ಧರ್ಮ ಸಂದೇಶದಿಂದ ಜೀವನದ ಸಂಘರ್ಷ ಪರಿಹಾರ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಜು.31) :** **'ಜೈನ ಧರ್ಮದ ಇಪ್ಪತ್ತಮೂರನೇಯ ತೀರ್ಥಂಕರರಾಗಿ ಶ್ರೀ ಪಾರ್ಶ್ವನಾಥ ಸ್ವಾಮಿ ಶ್ರಾವಣ ಶುಕ್ಲ ಸಪ್ತಮಿಯಂದು ಮೋಕ್ಷ ಪ್ರಾಪ್ತಿ ಮಾಡಿಕೊಂಡರು. ಅವರ ತಪಸ್ಸು, ಜ್ಞಾನ, ಧರ್ಮಪ್ರಜ್ಞೆಯು ಜೀವನದಲ್ಲಿ ಗೃಹಸ್ಥರಿಗೆ ಅಡೆತಡೆಯುಂಟು ಮಾಡುವ ಸಂಘರ್ಷ, ಕಂಟಕಗಳನ್ನು ಪರಿಹರಿಸುವ ಜೀವನ ಸೂತ್ರವಾಗಿದೆ'** ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಪ್ರವಚನದಲ್ಲಿ ತಿಳಿಸಿದರು. **'ದ್ವಾದಶಾಂಗ ಉಪದೇಶಗಳು ಜೀವನ ವ್ಯವಹಾರಕ್ಕೆ ನಂದಾದೀಪವಾಗಿ ಕಾಯ-ವಾಚಾ-ಮನಸಾ ಸದ್ಧರ್ಮ ಚಿಂತನೆಗೆ ಪ್ರೇರಣೆ ನೀಡಿದೆ'** ಎಂದು ಭಕ್ತರನ್ನು ಹರಸಿದರು.

ಪ್ರಾತಃಕಾಲ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಜಿನಮಂದಿರದಲ್ಲಿ ಷೋಡಶೋಪಚಾರ ಪೂಜೆ, ಅಷ್ಟವಿಧಾರ್ಚನೆ ವಿಧಾನಗಳ ಜಿನಾಗಮೋಕ್ತ ಪೂಜಾ ವಿಧಿಗಳನ್ನು ಸ್ವಸ್ತಿಶ್ರೀಗಳವರ ಉಪಸ್ಥಿತಿಯಲ್ಲಿ ನೆರವೇರಿಸಲಾಯಿತು. ನಿರ್ವಾಣ ಲಾಡು ಸಮರ್ಪಣೆ ಮಾಡಲಾಯಿತು.



ಬಳಿಕ ಅಭೀಷ್ಟವರ ಪ್ರದಾಯಿನಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ವಿಶೇಷ ಪೂಜೆ ನೆರವೇರಿತು. ಭಕ್ತರು ಶ್ರೀ ಪಾರ್ಶ್ವನಾಥ ತೀರ್ಥಂಕರರ ಸ್ತುತಿ, ಸ್ತೋತ್ರಗಳನ್ನು ಪಠಿಸಿದರು. ಪುರೋಹಿತರಾದ ಶ್ರೀ ಪದ್ಮರಾಜ ಇಂದ್ರ, ಸಹಪುರೋಹಿತರು ಪೂಜಾ ವಿಧಿಗಳನ್ನು ಪರಂಪರಾನುಗತವಾಗಿ ಅನುಷ್ಠಾನಗೊಳಿಸಿದರು.

### ಶ್ರೀಕ್ಷೇತ್ರ ಹೊಂಬುಜದಲ್ಲಿ ಯಜ್ಞೋಪವೀತ ಧಾರಣೆ

## "ಯಜ್ಞೋಪವೀತ ಧಾರಣೆಯಿಂದ ರತ್ನತ್ರಯ ಶ್ರೀರಕ್ಷೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಆ. 09) :** **'ಜೈನ ಧರ್ಮಿಯರು ಜೈನ ಸಿದ್ಧಾಂತಗಳನ್ನು ಅನೂಚಾನ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಸಮ್ಯಕ್ ದರ್ಶನ, ಜ್ಞಾನ, ಚಾರಿತ್ರ್ಯ ಆದರ್ಶಪ್ರಾಯವಾಗುತ್ತದೆ'** ಎಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ನೂಲು ಹುಣ್ಣಿಮೆಯಂದು ತಿಳಿಸಿದರು. **'ಯಜ್ಞೋಪವೀತ ಧಾರಣೆಯು ರತ್ನತ್ರಯಗಳ ಧಾರಣೆಯ ಸಂಕೇತವಾಗಿದ್ದು, ಜೀವನಕ್ಕೆ ಶ್ರೀರಕ್ಷೆ ಆಗಿದೆ'** ಎಂದು ಭಕ್ತರನ್ನು ಆಶೀರ್ವದಿಸಿ ಹರಸಿದರು.

ಪ್ರಾತಃ ಕಾಲ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಮತ್ತು ಅಭೀಷ್ಟವರಪ್ರದಾಯಿನಿ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪೂರ್ವ ಪರಂಪರೆಯ ಜಿನಾಗಮೋಕ್ತ ಪೂಜಾ ವಿಧಿ-ವಿಧಾನಗಳು ಪೂಜ್ಯ ಸ್ವಸ್ತಿಶ್ರೀಗಳ ಸಾನಿಧ್ಯದಲ್ಲಿ ನೆರವೇರಿತು. ಶ್ರೀ ಕುಂದಕುಂದ ವಿದ್ಯಾಪೀಠ ಗುರುಕುಲದ ವಿದ್ಯಾರ್ಥಿ ವೃಂದದವರು ಹಾಗೂ ಊರ ಪರವೂರ ಭಕ್ತಸಮುದಾಯದವರು ಶ್ರೀಗಳವರಿಂದ ಯಜ್ಞೋಪವೀತ ಪಡೆದು ಧನ್ಯರಾದರು.

### ಅಥಣಿ-ಶಿರಹಟ್ಟಿ ಭಕ್ತರಿಂದ ಹೊಂಬುಜದೆಡೆಗೆ ಪಾದಯಾತ್ರೆ

## "ಶ್ರದ್ಧಾ ಭಕ್ತಿ ಭಾವದ ಸದ್ಧರ್ಮಾಚರಣೆಯಿಂದ ಜೀವನ ಸುಗಮ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಆ.15) :** **'ಪ್ರತಿಯೋರ್ವರೂ ಸ್ವಧರ್ಮಾಚರಣೆಯನ್ನು ತ್ರಿಕರಣಪೂರ್ವಕ ಆಚರಿಸಬೇಕು. ಶ್ರದ್ಧಾಭಕ್ತಿಭಾವದ ಸದ್ಧರ್ಮಾಚರಣೆಯು ಜೈನ ಧರ್ಮದ ಸಿದ್ಧಾಂತವಾಗಿದೆ'** ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ತಿಳಿಸಿದರು. ಶಿರಹಟ್ಟಿ ಅಥಣಿ ಐನಾಪುರದಿಂದ 150 ಭಕ್ತರು ಪಾದಯಾತ್ರೆಯಲ್ಲಿ ಶ್ರೀಕ್ಷೇತ್ರಕ್ಕೆ ಆಗಮಿಸಿದ್ದರು.

ಅವರನ್ನು ಉದ್ದೇಶಿಸಿ **'ಜೀವನ ನಿರ್ವಹಣೆಯ ಅಡೆತಡೆಗಳ ನಿವಾರಣೆಗೆ ಶ್ರದ್ಧಾ ಭಕ್ತಿ ಭಾವದ ಸದ್ಧರ್ಮಾಚರಣೆಯೇ ಪರಿಹಾರ ಒದಗಿಸುತ್ತದೆ. ಸುಗಮ, ಸುರಕ್ಷಿತ ಜೀವನ ಸಾರ್ಥಕತೆ ಪಡೆಯಲು ಅತಿಶಯ ಶ್ರೀಕ್ಷೇತ್ರ ಹೊಂಬುಜ ದರ್ಶನಾರ್ಥಿಗಳಾಗಿ ಪ್ರತಿ ವರ್ಷವೂ ಆಗಮಿಸುತ್ತಿರುವುದು ಧರ್ಮಪ್ರಭಾವನೆಯ ಅಂಗವಾಗಿದೆ'** ಎಂದು ಉಪದೇಶಿಸಿದರು. ಸರ್ವರನ್ನೂ ಶ್ರೀಫಲ ಮಂತ್ರಾಕ್ಷತೆ ನೀಡಿ ಹರಸಿದರು.

ಶಿರಹಟ್ಟಿಯ ಮಿಲಿಂದ್ ಪಾಟೀಲ್, ರಾಜು ನಂದೇಶ್ವರ್ ಪಾದಯಾತ್ರೆ ತಂಡದಲ್ಲಿದ್ದು, ಶ್ರೀಗಳವರಿಗೆ ಭಕ್ತಿ ನಮನ ಸಲ್ಲಿಸಿದರು. ಶ್ರೀಕ್ಷೇತ್ರದ ಎಲ್ಲಾ ಜಿನಮಂದಿರಗಳ ದರ್ಶನ ಮಾಡಿ, ಪ್ರಾರ್ಥನೆ ಸಲ್ಲಿಸಿದರು. ಅವರು ಅಂದಿನ ಪೂಜಾ ಹಾಗೂ ಭೋಜನ ಸೇವಾಕರ್ತೃಗಳಾಗಿದ್ದರು.

## ಸಿ.ಎ. ಪರೀಕ್ಷೆಯಲ್ಲಿ ಹೆಚ್.ವಿ. ಪ್ರಜ್ವಲ್ ಉತ್ತೀರ್ಣ



**ಹೊಂಬುಜ :** ಇಲ್ಲಿಯ ಹೆಚ್.ವಿ. ಪ್ರಜ್ವಲ್ ಇವರು ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆ ಈಚೆಗೆ ನಡೆಸಿದ ಸಿ.ಎ. ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಹುಂಚಾದ ದಿ. ವಿಶ್ವಸೇನ ಇಂದ್ರ ಮತ್ತು ನಾಗರತ್ನ ಇವರ ಪುತ್ರರಾಗಿದ್ದಾರೆ.

ಇವರ ಈ ಯಶಸ್ಸಿಗೆ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು ಸ್ವಾಮೀಜಿಯವರು ಶುಭ ಹಾರೈಸಿದ್ದಾರೆ.

## ನವದೆಹಲಿ: ರಾಣಿ-ಚೆನ್ನಭೈರಾದೇವಿ ಸ್ಮಾರಕ ಅಂಚೆಚೀಟಿ ಬಿಡುಗಡೆ



ಇಡೀ ಭರತಖಂಡದಲ್ಲಿ 1552 ರಿಂದ 1606ರವರೆಗೆ 54 ವರ್ಷಗಳ ಸುದೀರ್ಘಕಾಲ ರಾಜ್ಯಭಾರ ನಡೆಸಿದ ರಾಣಿ ಚೆನ್ನಭೈರಾದೇವಿಯ ಸ್ಮರಣಾರ್ಥ ಎಕ್ಸಲೆಂಟ್ ಮೂಡುಬಿದಿರೆ ವಿದ್ಯಾಸಂಸ್ಥೆಯ ಪ್ರಯೋಜಕತ್ವದಲ್ಲಿ ಭಾರತೀಯ ಅಂಚೆ ಇಲಾಖೆ ಪ್ರಕಟಿಸಿದ ವಿಶೇಷ ಅಂಚೆ ಚೀಟಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮ ಅವರು ಜುಲೈ 24ರಂದು ರಾಷ್ಟ್ರಪತಿ ಭವನದಲ್ಲಿ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು ನಾಡಿನ ರಕ್ಷಣೆಗಾಗಿ ರಾಣಿ ಚೆನ್ನಭೈರಾದೇವಿ ನಡೆಸಿದ ಹೋರಾಟ, ಸಾಮಾಜಿಕ ಕಾಳಜಿ, ಜಾತ್ಯತೀತ ಮನೋಭಾವ, ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ಅಭಿವೃದ್ಧಿಗಾಗಿ ಆಕೆ ಕೈಗೊಂಡ ರಾಜನೀತಿ ಅವಿಸ್ಮರಣೀಯ. ಅಂಚೆ ಚೀಟಿ ಹೊರತಂದ ಭಾರತೀಯ ಅಂಚೆ ಇಲಾಖೆ ಹಾಗೂ ಪ್ರಯೋಜಕತ್ವ ಮಾಡಿದ ಮೂಡುಬಿದಿರೆ ಎಕ್ಸಲೆಂಟ್ ವಿದ್ಯಾಸಂಸ್ಥೆಯನ್ನು ಅಭಿನಂದಿಸಿದರು.

ರಾಜ್ಯಸಭಾ ಸದಸ್ಯ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ರಾಣಿಚೆನ್ನಭೈರಾದೇವಿ ಶೌರ್ಯ, ದೃಢ ನಿರ್ಧಾರ, ಉನ್ನತ ಆಡಳಿತ ಕೌಶಲ್ಯವನ್ನು ಹೊಂದಿದ್ದರು. ವಾಣಿಜ್ಯ ಮತ್ತು ನೌಕಾಯಾನದಲ್ಲಿ ದಿಟ್ಟ ಹೆಜ್ಜೆಯಿಟ್ಟ ಹೋರಾಟಗಾರ್ತಿ. ಪೋರ್ಚುಗೀಸ್ ಬಲಗಳ ವಿರುದ್ಧ ನಿರ್ಭೀತಿಯಾಗಿ ಪ್ರತಿರೋಧಿಸಿದ ರಾಷ್ಟ್ರೀಯ ಸ್ವಾಭಿಮಾನದ ಸಂಕೇತವಾಗಿದ್ದಾಳೆ. ಇಂತಹ ಮಹಾನ್ ಮಹಿಳೆಯ ನೆನಪಿಗಾಗಿ ಸ್ಮಾರಕ ಅಂಚೆಚೀಟಿ ಬಿಡುಗಡೆ ಮಾಡುವುದು ಹೆಮ್ಮೆಯ ವಿಚಾರ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡಿ ಸಹಕರಿಸಿದ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ ಅವರು ಮಾತನಾಡಿದರು. ಅಂಚೆ ಚೀಟಿಯ ಪ್ರಾಯೋಜಕರಾದ ಮೂಡುಬಿದಿರೆಯ ಎಕ್ಸಲೆಂಟ್ ವಿದ್ಯಾಸಂಸ್ಥೆಯ ಅಧ್ಯಕ್ಷ ಯುವರಾಜ ಜೈನ್, ದೆಹಲಿಯ ಅಂಚೆ ಮಹಾನಿರ್ದೇಶಕರಾದ ಅಖಿಲೇಶ್ ಕುಮಾರ್ ಪಾಂಡಿಯವರು, ಹುಬ್ಬಳ್ಳಿಯ ಸಾಮಾಜಿಕ ಕಾರ್ಯಕರ್ತ ಮಹೇಂದ್ರ ಸಿಂಗ್, ಖ್ಯಾತ ಲೇಖಕರಾದ ಡಾ. ಗಜಾನನ ಶರ್ಮ, ಸಂಯೋಜಕರಾದ ಹುಬ್ಬಳ್ಳಿಯ ಖ್ಯಾತ ಉದ್ಯಮಿ ಮಹಾವೀರ ಕುಂದೂರ್, ಎಕ್ಸಲೆಂಟ್ ವಿದ್ಯಾಸಂಸ್ಥೆಯ ಆಡಳಿತ ನಿರ್ದೇಶಕರೂ ಕಾರ್ಯಕ್ರಮದ ಸಂಯೋಜಕರೂ ಆದ ಡಾ. ಬಿ.ಪಿ. ಸಂಪತ್ ಕುಮಾರ್, ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಇತರೆ ಗಣ್ಯರು ಈ ಐತಿಹಾಸಿಕ ಸಮಾರಂಭಕ್ಕೆ ಸಾಕ್ಷಿಯಾದರು.

ಎಕ್ಸಲೆಂಟ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ರಶ್ಮಿತಾ ಜೈನ್ ಪ್ರಸ್ತಾವಿಕವಾಗಿ ಮಾತನಾಡಿದರು. ರಾಣಿ ಚೆನ್ನಭೈರಾದೇವಿಯ ಅಂಚೆ ಚೀಟಿ ಬಿಡುಗಡೆ ಸಮಾರಂಭವು ಇತಿಹಾಸದ ಪುಟದಲ್ಲಿ ಶಾಶ್ವತ ಸ್ಥಾನ ಪಡೆಯುವಲ್ಲಿ ಸಾರ್ಥಕತೆಯನ್ನು ಪಡೆಯಿತು.

## ಭಗವಾನ್ ಶ್ರೀ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿ ಪ್ರದಾನ



**ಬೆಂಗಳೂರು (ಜು. 17) :** ಇಲ್ಲಿಯ ರವೀಂದ್ರ ಕಲಾಕ್ಷೇತ್ರದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2024-25ನೇ ಸಾಲಿನ ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳನ್ನು ನಮ್ಮ ನಾಡಿನ ಜನಪ್ರಿಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಶಿವರಾಜ ತಂಗಡಗಿಯವರ ಉಪಸ್ಥಿತಿಯಲ್ಲಿ ಹಾಗೂ ಗಣ್ಯರ ಸಮ್ಮುಖದಲ್ಲಿ ಅತ್ಯಂತ ವೈಭವ ಮತ್ತು ವಿಜೃಂಭಣೆಯಿಂದ ನೆರವೇರಿದೆ. ಈ ಆತ್ಮೀಕ ಸಮಾರಂಭದಲ್ಲಿ ಕರ್ನಾಟಕ ಜೈನ ಅಸೋಸಿಯೇಷನ್, ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್‌ನ ಧರ್ಮದರ್ಶಿಗಳು ಹಾಗೂ ಜೈನ ಸಮಾಜದವರು ಮತ್ತು ಸಾರ್ವಜನಿಕರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್‌ನ ಹತ್ತು ಹಲವು ಸಾಹಿತ್ಯ ಸಾಮಾಜಿಕ ಕ್ಷೇತ್ರಗಳಲ್ಲಿ ಕಳೆದ 37 ವರ್ಷಗಳಿಂದ ಸಲ್ಲಿಸಿರುವ ಅಮೋಘ ಸೇವೆಯನ್ನು ಪರಿಗಣಿಸಿ 2024-25ನೇ ಸಾಲಿನ 'ಭಗವಾನ ಶ್ರೀ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿ' ಗೆ ಆಯ್ಕೆಯಾಗಿದ್ದು ಈ ಪ್ರಶಸ್ತಿಯನ್ನು ಟ್ರಸ್ಟಿನ ಪರವಾಗಿ ಚೇರ್ಮನ್‌ರಾದ ಶ್ರೀ ಎಸ್. ಜಿತೇಂದ್ರ ಕುಮಾರ್‌ರವರು ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. ಈ ಪ್ರಶಸ್ತಿಯು ಹತ್ತು ಲಕ್ಷ ರೂಪಾಯಿಗಳ ಗೌರವಧನ, ಪ್ರಶಸ್ತಿ ಪತ್ರ, ಸ್ಮರಣಿಕೆ ಒಳಗೊಂಡಿದೆ.

ಅಹಿಂಸೆ, ಶಾಂತಿ-ಸೌಹಾರ್ದತೆ, ಜನಕಲ್ಯಾಣ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪ್ರತಿಪಾದನೆ ಮತ್ತು ಅನುಷ್ಠಾನಕ್ಕಾಗಿ ನಿರಂತರ ಶ್ರಮಿಸುತ್ತಾ, ಅನುಪಮ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ, ಸಂಘ-ಸಂಸ್ಥೆಗಳನ್ನು ಗೌರವಿಸುವ ಸಲುವಾಗಿ ಕರ್ನಾಟಕ ಘನ ಸರ್ಕಾರವು 2016ನೇ ಸಾಲಿನಿಂದ ರಾಷ್ಟ್ರಮಟ್ಟದ **'ಭಗವಾನ ಶ್ರೀ ಮಹಾವೀರ ಶಾಂತಿ ಪ್ರಶಸ್ತಿ'**ಯನ್ನು ನೀಡುತ್ತಾ ಬಂದಿದೆ.

WWW.HOMBUJAPADMAVATI.ORG

# ಅಮೇರಿಕಾ ಚಿಕಾಗೋದಲ್ಲಿ ನಡೆದ ಅಂತರಾಷ್ಟ್ರೀಯ ಜೈನ ಸಮಾವೇಶ ಮತ್ತು ಪ್ರವಾಸದ ಚಿತ್ರಣ

1ನೇ ಪುಟದಿಂದ

ವಿವಿಧ ನಗರ ಬೇಟಿ.

1) ಚಿಕಾಗೋ– ಸುಂದರವಾದ ಪ್ರಮುಖ ವಾಣಿಜ್ಯ ನಗರಿ, ಇಲ್ಲಿಯ ಜೈನ ಬಸದಿಯ ದರ್ಶನ ಅಲ್ಲಿಯ ಚಟುವಟಿಕೆಗಳ ಮಾಹಿತಿ ಪಡೆದೆವು. ಸ್ವಾಮಿ ನಾರಾಯಾಣ ಮಂದಿರಗಳ, ವಿವೇಕಾನಂದರ ಸ್ಮಾರಕ, ವಿವಿಧ ಪ್ರೇಕ್ಷಣೆಯ ಸ್ಥಳಗಳನ್ನು ದಿನಾಂಕ 06 ರಿಂದ 9 ರವರೆಗೆ ಸ್ಥಳೀಯ ನಮ್ಮ ಜೈನ ಬಂಧುಗಳ ಜೊತೆ ವಿಕ್ಷಿಸಿದೆವು.

2) ವರ್ಜೀನೀಯಾ ಜುಲೈ 10 ನಗರದಲ್ಲಿ ನೂತನವಾಗಿ ನಿರ್ಮಿತವಾಗಿರುವ ದಿಗಂಬರ ಬಸದಿಯ ದರ್ಶನ ಮಾಡುವುದರ ಜೊತೆಗೆ ಸಿದ್ಧ ಚಕ್ರ ಮಹಾಮಂಡಲ ವಿಧಾನದ ಕೊನೆಯ ಪೂಜೆಗಳಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ನಂತರ ಅಲ್ಲಿಯ ಏರಂಡಸ್ಟ್ರೀಸ್ ಮ್ಯುಸಿಯಂ, ಮುಂತಾದ ಸ್ಥಳಗಳನ್ನು ಬೇಟಿ ನೀಡಿದೆವು.

3) ವಾಷಿಂಗಟನ್. ಡಿ.ಸಿ. ದಿನಾಂಕ 11 ಜುಲೈ ರಂದು ಅಮೇರಿಕಾ ದೇಶದ ರಾಜಧಾನಿಯ ಪ್ರಮುಖ ಸ್ಥಳಗಳನ್ನು ನೋಡಲಾಯಿತು. ಮಾನ್ಯುಮೆಂಟ್ ಟವರ್, ವೈಟ್ ಹೌಸ್ ಮುಂಭಾಗ, ಸುಪ್ರೀಂಕೋರ್ಟ್, ಕ್ಯಾಪಿಟಲ್ ಹೌಸ್ (ಸಂಸತ್), ವಾರ್ ಮೇಮೋರಿಯಲ್ ಮುಂತಾದ ಐತಿಹಾಸಿಕ ಸ್ಥಳಗಳನ್ನು ನೋಡಲಾಯಿತು. ನೂರಾರು ವರ್ಷಗಳ ಕಟ್ಟಡಗಳನ್ನು ಅಭಿಮಾನ ಪೂರ್ವಕ ಸಂರಕ್ಷಿಸುವುದರ ಜೊತೆಗೆ ಪ್ರೇಕ್ಷಣೆಯ ಸ್ಥಳಗಳಾಗಿ ಅಬಿವೃದ್ಧಿ ಪಡಿಸಿರುತ್ತಾರೆ. ಶ್ರೀ ಶಾಂತಿಪ್ರಸಾದ, ಶ್ರೀಮತಿ ನಮ್ರತ ಹಾಗು ಶ್ರೀ ವಸಂತಕುಮಾರ್, ಶ್ರೀಮತಿ ಪದ್ಮಿಣಿಯವರ ಮನೆಯಲ್ಲಿ ಅನೇಕ ನಮ್ಮ ಕನ್ನಡ ಜೈನ ಬಂಧುಗಳ ಬೇಟಿಗೆ ಸಮಯಾವಕಾಶ ಸಿಕ್ಕಿತು. ಅನೇಕರು ಉದ್ಯೋಗ ನಿಮಿತ್ತ ಅಲ್ಲಿಯೇ ನೆಲೆಸಿದ್ದರು ನಮ್ಮ ಧರ್ಮ ಸಂಸ್ಕೃತಿಯನ್ನು ಅಚ್ಚುಕಟ್ಟಾಗಿ ಪಾಲನೆ ಮಾಡುತ್ತಿದ್ದಾರೆ.

4) ಮೇರಿಲ್ಯಾಂಡ್ ಬಸದಿ : ನ್ಯೂಜೆರ್ಸಿ ಹೋಗುವ ರಸ್ತೆ ಮಾರ್ಗದಲ್ಲಿ ಇಲ್ಲಿಯ ನೂತನ ಜೈನ ಮಂದಿರವನ್ನ ದರ್ಶನ ಪಡೆದೆವು. ಶಾಂತಿನಾಥ ವಿಧಾನ ನಡೆದಿದ್ದ ಸಮಯದಲ್ಲಿ ಸ್ವಲ್ಪ ಸಮಯ ವಿಧಾನ ಮಹಿಮೆಯ ಬಗ್ಗೆ ಪ್ರವಚನ ಮಾಡಿ ಪ್ರಯಾಣ ಮುಂದುವರಿಸಿದೆವು.

5) ಸಿದ್ಧಾಚಲ ಸಮ್ಮೇದಗಿರಿ ತೀರ್ಥಂ – ನ್ಯೂಜೆರ್ಸಿ ದಿನಾಂಕ ಜುಲೈ 13

ಸುಮಾರು 40 ವರ್ಷಗಳ ಹಿಂದೆ ಆಚಾರ್ಯ ಸುಶೀಲಜೀಯವರ ಮಾರ್ಗದರ್ಶನದಲ್ಲಿ ಸುಮಾರು 120 ಎಕರೆ ಪ್ರದೇಶದಲ್ಲಿ ಕಳೆದ 15 ವರ್ಷಗಳ ಹಿಂದೆ ಸಮ್ಮೇದ ಶಿಖರ್ಜಿ ಪ್ರತಿಕೃತಿಯನ್ನು ರಚಿಸಿ 24 ತೀರ್ಥಂಕರರ ಕೂಟಗಳನ್ನು ರಚಿಸಿರುತ್ತಾರೆ ಉತ್ತಮ ಪರಿಸರದಲ್ಲಿ ಸುಸಜ್ಜಿತ ತೀರ್ಥಕ್ಷೇತ್ರವಾಗಿ ನಿರ್ಮಾಣವಾಗಿದೆ. ಇತ್ತೀಚೆಗೆ ಭಗವಾನ್ ಬಾಹುಬಲಿ ಮೂರ್ತಿ ಸ್ಥಾಪನೆಗಾಗಿ ಶಿಲಾನ್ಯಾಸ ನಡೆದಿದೆ.

ಹಿಂದಿನ ಹೊಂಬುಜ ಶ್ರೀಗಳು, ಮೂಡಬಿದ್ರೆ ಶ್ರೀಗಳು ಇಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತಾರೆ. ಅಲ್ಲಿಯ ನಗರದಲ್ಲಿನ ದಿಗಂಬರ ಜೈನ ಬಸದಿ ದರ್ಶನ ಮಾಡಿದೆವು. ಇದು ಸುಂದರವಾದ ಅಮೃತ ಶಿಲೆಯಲ್ಲಿ ನಿರ್ಮಾಣವಾಗಿದೆ. ಹಿಂದಿನ ಹೊಂಬುಜ ಶ್ರೀಗಳ ಕೊನೆಯದಾಗಿ ಭೂಮಿ ಪೂಜೆ ಮಾಡಿದ ಸ್ಥಳ. ಅಲ್ಲಿಯೇ ಧರ್ಮಾಭಿಮಾನಿಗಳ ಪೂಜ್ಯ ಸ್ವಾಮೀಜಿಯವರ ಜೊತೆಗೆ ಮಧುರ ನೆನಪುಗಳ ಮೆಲಕು ಹಾಕಿದರು.

WWW.HOMBUJAPADMAVATI.ORG

6) ನ್ಯೂಯಾರ್ಕ್. ಜುಲೈ 14, 15, 16

ಅಮೇರಿಕ ದೇಶದ ಪ್ರಸಿದ್ಧ ಮತ್ತು ವಿಶ್ವದ ಪ್ರಮುಖ ವಾಣಿಜ್ಯನಗರದ ಪರಿಭ್ರಮಣೆಯನ್ನು 3 ದಿನಗಳಲ್ಲಿ ಮಾಡಲಾಯಿತು. ಯು.ಎನ್ ನೇಷನ್ ಹೌಸ್, ಒನ್ ವರ್ಲ್ಡ್ ಬಿಲ್ಡಿಂಗ್, ಸ್ಟಾಕ್ ಎಕ್ಸ್‌ಚೆಂಜ್ ಮುಂತಾದ ಪ್ರಮುಖ ಸ್ಥಳಗಳನ್ನು ಬೇಟಿ ನೀಡಿದೆವು. ದೋಣಿ ಮೂಲಕ ನಗರ ಪ್ರದಕ್ಷಿಣೆ ಮಾಡಿದೆವು ಅಲ್ಲಿ ಜೈನ ಮಂದಿರ ದರ್ಶನ ಮಾಡಿದೆವು. ಹಾಗೂ ಪ್ರವಚನ ಸಭೆಯಲ್ಲೂ ಭಾಗವಹಿಸಿದೆವು. 12–13 ದಿನಗಳ ಪ್ರವಾಸವನ್ನು ಮುಗಿಸಿ 18 ಜುಲೈಗೆ ನಮ್ಮ ದೇಶವನ್ನು ಕ್ಷೇಮವಾಗಿ ತಲುಪಿದೆವು.

ಸಮಾವೇಶದ ನಿಮಿತ್ತ ಪ್ರಯಾಣಿಸಿದರು. ಕೆಲವು ನಗರಗಳನ್ನು ನೋಡುವಂತೆ ಹಾಗೂ ಎಲ್ಲಾ ಅನುಕೂಲಗಳನ್ನು ಮಾಡುವಲ್ಲಿ ಅಲ್ಲಿನ ನಮ್ಮ ಜೈನ ಬಂಧುಗಳು ಸಹಕರಿಸಿದರು.

ವಿಶೇಷವಾಗಿ ಆಕರ್ಷ ದೇವೇಂದ್ರಸ್ವಾಮಿ ಬೆಂಗಳೂರು ನಮ್ಮ ಸಂಪೂರ್ಣ ಕಾರ್ಯಕ್ರಮದ ಜವಾಬ್ದಾರಿಯ ಜೊತೆಗೆ ಎಲ್ಲ ರೀತಿಯ ಸಹಕಾರವನ್ನು ನೀಡಿದರು. ಜೈನ ಗ್ರೂಪನ ಅತುಲ್ ಶಹಾ, ಸಂಗಡಿಗರು, ಅವಕಾಶವನ್ನು ಮಾಡಿಕೊಟ್ಟರು. ಭರತ್, ಅರ್ಚನ, ಸುಮನ್ ಸೇನ್, ಜಯಂತ್, ಅಮಿತ್, ಕೀರ್ತಿ ಪಾಟೀಲ್ ಚಿಕಾಗೊದಲ್ಲಿ ವಸತಿ, ಆಹಾರ ಮುಂತಾದ ವ್ಯವಸ್ಥೆಗಳನ್ನು ನೋಡಿಕೊಂಡರು.

ಅವರೆಲ್ಲರಗೂ ಕ್ಷೇತ್ರ ಸನ್ನಿಧಾನದ ಆಶೀರ್ವಾದಗಳು.

ಜೈನಂ ಜಯತು ಶಾಸನಮ್

ವರ್ಧತಾಂ ಶಾಸನಮ್ ಜಿನಶಾಸನಮ್



ನ್ಯೂಯಾರ್ಕ್ ಜೈನ್ ಬಸದಿ




ನ್ಯೂಜೆರ್ಸಿ ದಿಗಂಬರ ಜೈನ ಬಸದಿ



ಸಿದ್ಧಾಚಲಂ ಸಮ್ಮೇದಗಿರಿ ತೀರ್ಥಂ ನ್ಯೂಜೆರ್ಸಿ



ಸಿದ್ಧಾಚಲಂ ಸಮ್ಮೇದಗಿರಿ ತೀರ್ಥಂ ನ್ಯೂಜೆರ್ಸಿ



ಚಿಕಾಗೋ ಜೈನ ಬಸದಿ

ಗುರುದೇವ GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26
ವಾರ್ಷಿಕ ಚಂದಾ : ರೂಪಾಯಿ 150–00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000–00 ಮಾತ್ರ.
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬.

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722